ಇ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉದ್ದೇಮೆಗಳನ್ನು ಪ್ರಾರಂಭಿಸಲು ಅವೇಕ್ಷಿಸಿ ಸರ್ಕಾರದ ಅನುಮತಿ ಕೋರಿ ಸಲ್ಲಿಸುವ ಯೋಜನಾ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಮತ್ತು ಉನ್ನತ ಮಟ್ಟದ ಸಮಿತಿಯು ಅಂಗೀಕರಿಸಿದ್ದನ್ನು ಆಧರಿಸಿ ಆ ನಿಟ್ಟಿನಲ್ಲಿ ಸೂಕ್ತ ಸರ್ಕಾರಿ ಆದೇಶಗಳನ್ನು ಹೊರಡಿಸುವಾಗ ಸದರಿ ಆದೇಶಗಳಲ್ಲಿ ಡಾ. ಸರೋಜಿನಿ ಮಹಿಷಿ ವರದಿಗೆ ಅನುಸಾರವಾಗಿ ಸ್ಥಳೀಯರಿಗೆ ಉದ್ದಿಮೆಗಳಲ್ಲಿ ನೀಡಿರುವ ಉದ್ಯೋಗಗಳ ಬಗ್ಗೆ ಅವಲೋಕಿಸುವ ಸಲುವಾಗಿ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವತಿಯಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಗಳನ್ನು ರಚಿಸಿದ್ದು ಸದರಿ ಸಮಿತಿಗಳು ಕಾಲಕಾಲಕ್ಕೆ ಸಭೆ ನಡೆಸಿ ಈ ದಿಸೆಯಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿವೀಕ್ಷಿಸುತ್ತಿವೆ.

5737, (6624) ಶ್ರೀ ರಘುಪತಿ ಭಟ್ .ಕೆ (ಉಡುಪಿ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಉಡುಪಿ ದಕ್ಷಿಣ ಕನ್ನಡ ಜಿಲ್ಲೆಗಳ ನದಿ ಜೋಡಣೆಯ ಪ್ರಸ್ತಾವನೆಯು ಹಿರಿಯ ಕೃಷಿಕರು ಮಾಜಿ ಶಾಸಕರಾದ ಎ.ಜಿ. ಕೊಡ್ಗಿಯವರು ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಾಗಲೆ ಈ ಪ್ರಸ್ತಾವನೆಯು 11th National Water Convention ನಲ್ಲಿ ಸೇರ್ಪಡೆ ಆಗಿ ಪ್ರಕಟವಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಈ ಯೋಜನೆ ಬಗ್ಗೆ ಅಧ್ಯಯನ ಮಾಡಲು ಸರ್ಕಾರ ಉದ್ದೇಶಿಸಿದೆಯೇ ಪ್ರಾರಂಭಿಕವಾಗಿ ಅಧ್ಯಯನಕ್ಕೆ ಎಷ್ಟು ಹಣ ನಿಗದಿ ಮಾಡಲಾಗಿದೆ;

ಈ) ಈ ನದಿ ಜೋಡಣೆ ಯೋಜನೆಯಿಂದ ಎರಡು ಜಿಲ್ಲೆಗಳ ನೀರಿನ ಸಮಸ್ಯೆ ಹಾಗೂ ಅಂತರ್ಜಲ ವೃದ್ಧಿ ಆಗುವುದೆಂದು ಸರ್ಕಾರ ಗಮನಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು.

ಅ) ಬಂದಿದೆ.

ಆ) ಹೌದು.

ಇ) ಯೋಜನೆಗಳ ಅಧ್ಯಾಯನಕ್ಕೆ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯ ವರದಿಯು ಇನ್ನೂ ಬಂದಿರುವುದಿಲ್ಲ. ಈ ಹಂತದಲ್ಲಿ ಹಣ ನಿಗದಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಅಧ್ಯಾಯನ ವರದಿಯ ಪರಿಶೀಲನೆಯ ನಂತರ ಎಲ್ಲಾ ವಿವರಗಳು ತಿಳಿದು ಬರುತ್ತದೆ.

5738, (6625) ಶ್ರೀ ರಘುಪತಿ ಭಟ್ .ಕೆ (ಉಡುಪಿ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಉಡುಪಿ–ಮಣಿಪಾಲ ರಸ್ತೆ ಅಗಲೀಕರಿಸಿ ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಈ ಯೋಜನೆಯ ಭೂಸ್ವಾಧೀನಕ್ಕೆ ಬೇಕಾಗುವ ಹಣವನ್ನು ಈ ವರ್ಷದಲ್ಲೇ

ಮಂಜೂರು ಮಾಡಲಾಗುವುದೇ:

ಇ) ಈ ಯೋಜನೆಯ ಪ್ರಸ್ತಾವನೆಯು ಇತ್ತೀಚೆಗೆ ಸಚಿವ ಸಂಪುಟದ ಮುಂದೆ ಇಡಲಾಗಿದೆಯೇ:

ಈ) ಯಾವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ:

ಉ) ಸನ್ಮಾನ್ಯ ಮುಖ್ಯಮಂತ್ರಿಯವರು ಹಿಂದೆ ಪಿ.ಡಬ್ಲ್ಯೂ.ಡಿ. ಸಚಿವರಾಗಿದ್ದಾಗ ಸ್ಥಳಕ್ಕೆ ಭೇಟಿ ನೀಡಿ ಈ ಯೋಜನೆಯನ್ನು ಕಾರ್ಯಗತಗೊಳಿಸುವುದಾಗಿ ಭರವಸೆ ನೀಡಿರುವುದು ನಿಜವೇ:

ಊ) ಈಗ ಮುಖ್ಯ ಮಂತ್ರಿ ಆದ್ದರಿಂದ ಈ ಯೋಜನೆಗೆ ಚಾಲನೆ ಸಿಗಲಿರುವುದೇ ?

ಶ್ರೀ ಹೆಚ್. ಡಿ. ರೇವಣ್ಣ, ಲೋಕೋಪಯೋಗಿ ಹಾಗೂ ಇಂಧನ ಸಚಿವರು

ಅ) ಇದೆ.

ಆ) ಅನುದಾನದ ಲಭ್ಯತೆಯ ನಂತರ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ದಿನಾಂಕ 30–10–2001 ರಂದು ಅಂದಿನ ಮಾನ್ಯ ಲೋಕೋಪಯೋಗಿ ಸಚಿವರು (ಹಾಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು) ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಕಾಮಗಾರಿಗಳ ಪ್ರಗತಿಪರಿಶೀಲನಾ ಸಂದರ್ಭದಲ್ಲಿ ಭರವಸೆ ನೀಡಿದ್ದಾರೆ.

ಊ) ಅನುದಾನ ದ್ದೊರೆತ ನಂತರ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

5740. (6521) ಶ್ರೀ ರೇಣುಕಾಚಾರ್ಯ ಎಂ. ಪಿ. (ಹೊನ್ನಾಳಿ) :– ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೊನ್ನಾಳಿ ತಾಲ್ಲೂಕಿಗೆ ಪೌರಾಡಳಿತ ಇಲಾಕೆಯಿಂದ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಹಣ ಎಷ್ಟು (ವಿವರಣೆ ನೀಡುವುದು):

ಆ) ಬಿಡುಗಡೆಯಾದ ಹಣದಲ್ಲಿ ಕಳೆದ ಮೂರು ವರ್ಷದಲ್ಲಿ ಯಾವ ಯಾವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಯಾ ಹಂತದಲ್ಲಿದೆ (ವಿವರ ನೀಡುವುದು):

ಇ) ಇಲ್ಲಿಯವರೆಗೆ ವೆಚ್ಚವಾಗಿರುವ ಹಣ ಎಷ್ಟು:

ಈ) ಬಾಕಿ ಉಳಿದಿರುವ ಹಣ ಎಷ್ಟು (ವಿವರಣೆ ನೀಡುವುದು):

ಶ್ರೀ ಎಸ್. ಆರ್. ಮೋರೆ, ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು.

ಅನುದಾನ	2002–03	2003–04	2004–05	ಒಟ್ಟು ಲಕ್ಷ ರೂಗಳಲ್ಲಿ
ಎಸ್‌ಎಫ್‌ಸಿ ವೇತನ	14.61	13.99	17.76	46.36
ಎಸ್‌ಎಫ್‌ಸಿ ಅಭಿವೃದ್ಧಿ ಅನುದಾನ	20.00	–	–	20.00